ನಾವು ಬಿಜಾಪುರದಿಂದ ಬೆಂಗಳೂರಿಗೆ ಬರಬೇಕಾದರೆ ಬ್ರಾಡ್‌ಗೇಜ್ ಫೆಸಿಲಿಟಿ ಇಲ್ಲ. ಅಟ್‌ಲೀಸ್ಟ್ 4 ಲೈನ್ ಹೈವೇ ಇದ್ದರೆ, ಅಟ್‌ಲಿಸ್ಟ್ ಜೀವವನ್ನಾದರೂ ಗಟ್ಟಿಯಾಗಿಟ್ಟುಕೊಂಡು ನಾವು ಬರಬಹುದು. ಇದಕ್ಕೆ ಮೊದಲು ಆದ್ಯತೆ ಕೊಟ್ಟಿಲ್ಲವೆಂದು ಹೇಳಿದ್ದೀರಿ. ಕೋಲಾರ-ಹಾಸನ ಬಗ್ಗೆ ಮೊದಲನೆ ಆದ್ಯತೆ ಸಿಗಬಹುದೆಂದೆ ನಿಮ್ಮ ಪತ್ರಿಕಾ ಹೇಳಿಕೆ ಇದೆ. ಹಾಸನ ಮತ್ತು ಬೆಂಗಳೂರು ಬಗ್ಗೆ, ಕೋಲಾರ ಮತ್ತು ಬೆಂಗಳೂರು ಬಗ್ಗೆ ನಿಮ್ಮದೇ ಪತ್ರಿಕಾ ಹೇಳಿಕೆ ಇದೆ. ನೀವೇ ಹೋಗಿ ಬಂದ ಮೇಲೆ ಕೊಟ್ಟಿರುವ ಹೇಳಿಕೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದನ್ನು ಆಯ್ಕೆ ಮಾಡುವ ಅಧಿಕಾರ ನನಗಿಲ್ಲ. ನಾನೊಬ್ಬ ಹಾಸನ ಜಿಲ್ಲಾ ಪ್ರತಿನಿಧಿಯಾಗಿ ಕೇಂದ್ರ ಸರ್ಕಾರದ ಮುಂದೆ ಮನವಿ ಮಾಡಿದ್ದೇನೆಯೇ ಹೊರತು ಅದನ್ನು ಪರಿಶೀಲನೆ ಮಾಡಿ ಅವರು ತೆಗೆದುಕೊಳ್ಳುತ್ತಾರೆ. ಇದನ್ನು ಮಾಡಬೇಕೆಂದು ಒತ್ತಾಯಿಸುತ್ತೇನೆ. ಏಕೆಂದರೆ, ಮಾನ್ಯ ಸದಸ್ಯರು 40 ಸಾವಿರ ವೆಹಿಕಲ್ಸ್ ಅಡ್ಡಾಡುತ್ತಿವೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇನೆ. ಬೇಕಾದರೆ ಮಾನ್ಯ ಶಿವಾನಂದರವರನ್ನು ಕರೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಮೇಲೆ ಯಾವ ತರಹ ಒತ್ತಾಯ ತರಬೇಕೋ ಅವರ ಜೊತೆಗೆ ಹೋಗಿ ಒತ್ತಾಯ ತರುತ್ತೇನೆಂದು ಹೇಳುತ್ತೇನೆ.

ಗುಲ್ಬರ್ಗಾ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ

121(865) : ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) ಮಾನ್ಯ ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು; ಹಾಗೂ ಇವುಗಳಲ್ಲಿ ದೊಡ್ಡ ಹಾಗೂ ಸಣ್ಣ ಕೈಗಾರಿಕೆಗಳೆಷ್ಟು;

ಆ) ಸಣ್ಣ ಕೈಗಾರಿಕಾ ಘಟಕಗಳಿಗೆ ಸರ್ಕಾರದಿಂದ ನೀಡುತ್ತಿರುವ ಸಹಾಯಧನ (ಸಬ್ಸಿಡಿಯನ್ನು) ನೀಡಲಾಗಿದೆಯೇ;

ಇ) ಹಾಗಿದ್ದಲ್ಲಿ ಎಷ್ಟನ್ನು ನೀಡಲಾಗಿದೆ;

ಈ) ಇನ್ನು ಎಷ್ಟು ಬಾಕಿ ಇದೆ; ಹಾಗೂ ಯಾವಾಗ ನೀಡಲಾಗುವುದು (ವಿವರ ಒದಗಿಸುವುದು)

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದಿನಾಂಕ 31-3-04ರಂತೆ ಗುಲ್ಬರ್ಗಾ ಜಿಲ್ಲೆಯಲ್ಲಿ 11622 ಕೈಗಾರಿಕೆಗಳಿಗೆ, ಇವುಗಳಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು 18 ಇದ್ದು ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು 11604 ಇರುತ್ತದೆ.

ಆ) ಜನವರಿ 1999ರವರೆಗಿನ ಘಟಕಗಳಿಗೆ ಮಂಜೂರಾದ ರಾಜ್ಯ ಸಹಾಯಧನವನ್ನು ಅಕ್ಟೋಬರ್ 1999ರವರೆಗಿನ ಘಟಕಗಳಿಗೆ ಸ್ವಂತ ಬಂಡವಾಳ ಹೂಡಿದ ಕೈಗಾರಿಕೆಗಳನ್ನು ಹೊರತುಪಡಿಸಿ ಶೇ. 50 ರಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ ಮತ್ತು ಫೆಬ್ರವರಿ 2000ರವರೆಗಿನ ವಿಶೇಷ ವರ್ಗದ ಘಟಕಗಳಿಗೆ ಸ್ವಂತ ಬಂಡವಾಳ ಹೂಡಿದ ಕೈಗಾರಿಕೆಗಳನ್ನು ಹೊರತುಪಡಿಸಿ ಶೇ. 50ರಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ.

ಇ) ದಿನಾಂಕ 1-1-99 ರಿಂದ ಮಂಜೂರಾಗಿರುವ ಮೊತ್ತದಲ್ಲಿ ಶೇ. 50ರಂತೆ 79 ಘಟಕಗಳಿಗೆ 106.01 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಈ) ದಿನಾಂಕ 31-3-04 ರಂತೆ 557 ಘಟಕಗಳಿಗೆ ರೂ. 1358.87 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಬಾಂಡ್‌ಗಳ ಮುಖಾಂತರ ಈಗಾಗಲೇ ರೂ. 81.00 ಕೋಟಿಗಳನ್ನು ಸಂಗ್ರಹಿಸಲಾಗಿದೆ. ಸಂಬಂಧಪಟ್ಟ ಘಟಕಗಳಿಗೆ ಬಿಡುಗಡೆಗೊಳಿಸಲು ಪಾರದರ್ಶಕವಾದ ನಿಯಮಾವಳಿಗಳನ್ನು ರೂಪಿಸಲಾಗುತ್ತಿದ್ದು, ಅತಿ ಶೀಘ್ರದಲ್ಲಿ ಕ್ರೋಢೀಕರಿಸಿ ಮೊತ್ತವನ್ನು ಬಿಡುಗಡೆ ಮಾಡಲಾಗುವುದು. ಇದರಲ್ಲಿ ಗುಲ್ಬರ್ಗಾ ಜಿಲ್ಲೆಯ ಘಟಕಗಳಿಗೂ ಕೂಡ ಬಿಡುಗಡೆ ಮಾಡಲಾಗುವುದು.

ಅಧ್ಯಕ್ಷರು : ಮಾನ್ಯ ಸದಸ್ಯರು ಉಪ ಪ್ರಶ್ನೆ ಮಾತ್ರ ಕೇಳಿ.

ಶ್ರೀ ರೇವುನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ನಾನು ಮೊದಲು ಮಾನ್ಯ ಕಾಶ್ಯಪ್ಪನವರು ಮಂತ್ರಿಗಳಾಗಿದ್ದಾಗ ಇದೇ ಪ್ರಶ್ನೆ ಕೇಳಿದ್ದೆ. ಅದಕ್ಕೆ ಅವರು ಶೀಘ್ರದಲ್ಲಿ ಹಣ ಬಿಡುಗಡೆ ಮಾಡುತ್ತೇವೆಂದು ಉತ್ತರ ಹೇಳಿದ್ದರು. ಆದರೆ, ಇಲ್ಲಿ ಸಹಾಯಧನ ಹಣ ಬಿಡುಗಡೆ ಆಗಿಲ್ಲ. ತಾವು ಹಿರಿಯರು ಮತ್ತು ಗುಲ್ಬರ್ಗಾ, ಬೀದರ್ ಜಿಲ್ಲೆಗಳ ಬಗ್ಗೆ ಬಹಳ ಆಸಕ್ತಿ ವಹಿಸಿದ್ದವರಿದ್ದೀರಿ. ತಮಗೆ ನಾನು ವಿನಂತಿಸುತ್ತೇನೆ, ನಿರ್ದಿಷ್ಟವಾಗಿ ಇಷ್ಟು ದಿನಗಳಲ್ಲಿ ಬಿಡುಗಡೆ ಮಾಡುತ್ತೇನೆಂದು ತಾವು ಉತ್ತರಿಸುತ್ತೀರೆಂದು ನಾನು ನಿರೀಕ್ಷಿಸುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗಾಗಲೇ ಅನೇಕ ಬಾರಿ ಈ ಸದನದಲ್ಲಿ ಭರವಸೆ ಕೊಟ್ಟಿದ್ದೇನೆ. 85 ಕೋಟಿ ರೂಪಾಯಿಗಳ ಜೊತೆಗೆ ಇನ್ನೂ 64 ಕೋಟಿ ರೂಪಾಯಿಗಳನ್ನು ನಾವು ಕೆಎಸ್‌ಎಫ್‌ಸಿಯಿಂದ ಸಂಗ್ರಹಿಸುತ್ತಿದ್ದೇವೆ. ಗುಲ್ಬರ್ಗಾ ಜಿಲ್ಲೆಗೆ ಸುಮಾರು 13 ಕೋಟಿ ರೂಪಾಯಿಗಳ ಸಬ್ಸಿಡಿ ಹಣ ಬಿಡುಗಡೆ ಮಾಡುವುದು ಬಾಕಿ ಇದೆ. ಅಧಿವೇಶನದ ನಂತರ ಗೈಡ್‌ಲೈನ್ಸ್ ಫಿಕ್ಸ್ ಮಾಡುತ್ತೇವೆ.

ಗೈಡ್ ಲೈನ್ಸನ್ನು ಫಿಕ್ಸ್ ಮಾಡಿದ ನಂತರ, ಟ್ರಾನ್ಸ್‌ಪರೆಂಟಾಗಿ ಎಲ್ಲಾ ಜಿಲ್ಲೆಗಳಲ್ಲೂ ಇದನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಬಹುಶಃ, ಇನ್ನು 2-3 **ತಿಂಗಳೊಳಗೆ ಎಲ್ಲರಿಗೂ ಹಣ ಸಿಗುತ್ತದೆ.**

ಶ್ರೀ ರೇವುನಾಯಕ್ ಬೆಳಮಗಿ : ಮೂರು ತಿಂಗಳು ಎಂದರೆ ಬಹಳ ಲೇಟಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : 85 ಕೋಟಿ ರೂಪಾಯಿಗಳನ್ನು ಈ ತಿಂಗಳಲ್ಲೇ ಅಂದರೆ ಆಗಸ್ಟ್‌ನಲ್ಲೇ ಬಿಡುಗಡೆ ಮಾಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡಿದ್ದೇನೆ. ಉಳಿದಿರತಕ್ಕಂಥ 60 ಕೋಟಿ ರೂಪಾಯಿಗಳನ್ನು ನಾವು ರೈಸ್ ಮಾಡಬೇಕಾಗುತ್ತದೆ ಅಂದರೆ ಅದನ್ನು ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಒಂದೆರಡು ತಿಂಗಳು ಬೇಕಾಗಬಹುದು. ಇದೇ ಗೈಡ್‌ಲೈನ್ಸ್ ಆಧಾರದ ಮೇಲೆ ಆ 85 ಕೋಟಿ ರೂಪಾಯಿಗಳ ಜೊತೆಗೆ ಆ 60 ಕೋಟಿ ರೂಪಾಯಿಗಳನ್ನೂ ಬಿಡುಗಡೆ ಮಾಡುತ್ತೇವೆ. ಆಗಸ್ಟ್ ತಿಂಗಳ ಅಂತ್ಯದೊಳಗೆ ಇದನ್ನು ಬಿಡುಗಡೆ ಮಾಡಲು ನಾನು ಪ್ರಯತ್ನ ಮಾಡುತ್ತೇನೆ.

ವಿದ್ಯುತ್ ಚಾಲಿಕ ಕೈಮಗ್ಗಗಳಿಗೆ ವಿದ್ಯುತ್ ಸರಬರಾಜು

122(880) : ಶ್ರೀ ಸಿದ್ದು ಸವದಿ (ಜಮಖಂಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿದ್ಯುತ್ ಚಾಲಿತ ಮಗ್ಗಗಳಿಗೆ ಮಹಾರಾಷ್ಟ್ರ ಆಂಧ್ರ ಗುಜರಾತ್ ಹಾಗೂ ಇತರೆ ಬೇರೆ ಬೇರೆ ರಾಜ್ಯಗಳಲ್ಲಿ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಯಾಗುತ್ತಿರುವುದರಿಂದ ನಮ್ಮ ರಾಜ್ಯದ ನೇಕಾರರಿಗೂ ಸಹ ಈ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು;

ಆ) ರೈತರಿಗೆ ನೀಡಿರುವಂತೆ ನೇಕಾರರಿಗೂ ಶೇಕಡ 4ರ ಬಡ್ಡಿಯಂತೆ 10 ಲಕ್ಷ ರೂ. ವರೆಗೆ ಸಾಲ ಸೌಲಭ್ಯ ಕೊಡುವ ಬಗ್ಗೆ ಸರ್ಕಾರ ತಕ್ಕ ಕ್ರಮಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ವಿದ್ಯುತ್ ಮಗ್ಗ ನೇಕಾರರಿಗೆ ನೆರೆ ರಾಜ್ಯಗಳಲ್ಲಿ ನೀಡಿರುವ ವಿದ್ಯುತ್ ರಿಯಾಯಿತಿಗಳನ್ನು ಪರಿಶೀಲಿಸಿದ ನಂತರ ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ವಾಕೈ 110 ಜಕೈಇ 2003, ದಿನಾಂಕ 26-2-2004ರಲ್ಲಿ ನೇಕಾರರಿಗೆ ವಿಶೇಷ ಪ್ಯಾಕೇಜ್ ಘೋಷಿಸಿದೆ. ಇದರಡಿ 5 ಹೆಚ್‌ಪಿ ಜೋಡಣೆ ಹೊಂದಿರುವ ವಿದ್ಯುತ್ ಮಗ್ಗದ ಘಟಕಗಳು (ಗರಿಷ್ಠ 4 ಮಗ್ಗಗಳಿಗೆ ಮಿತಿಗೊಳಿಸಿದಂತೆ) ಪ್ರತಿ ತಿಂಗಳು ಪ್ರತೀ ಮಗ್ಗಕ್ಕೆ ಶೇ. 50 ರಷ್ಟು ವಿದ್ಯುತ್‌ಚ್ಛಕ್ತಿ ವೆಚ್ಚ ಅಥವಾ ರೂ. 200/- ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟರ ಮೊತ್ತದ ಸಹಾಯಧನ ನೀಡಲಾಗುವುದು ಅದಲ್ಲದೇ 2004-05ನೇ ಸಾಲಿನ ಆಯವ್ಯಯ ಭಾಷಣದಲ್ಲಿ ವಿದ್ಯುತ್‌ಮಗ್ಗಗಳಿಗೆ ವಿದ್ಯುತ್ ಸಹಾಯಧನ ನೀಡುವುದನ್ನು ಪುನ:ರುಚ್ಚರಿಸಲಾಗಿದೆ.

ಆ) ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಅನೇಕ ಸಮೂಹಗಳಿಗೆ ಸರ್ಕಾರದಿಂದ ಸಹಾಯ ಸೌಲಭ್ಯಗಳು ದೊರಕುತ್ತಿವೆ. ಆದರೆ ಈ ಒಂದು ನೇಕಾರರ ದೊಡ್ಡ ಸಮೂಹ, ತುಳಿತಕ್ಕೆ ಒಳಗಾದಂಥ ಸಮೂಹ, ನಿರ್ಲಕ್ಷ್ಯಕ್ಕೆ ಒಳಗಾದಂಥ ಸಮೂಹ, ಅವರ ಜೀವನದ